ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ

ಸಿ.ಸಿ. ನಂಃ 35/2018

ಸಿ.ಡಬ್ಲ್ಯೂಃ 01
ಪಿ.ಡಬ್ಲ್ಯೂಃ 01

ಸಾಕ್ಷಿದಾರರ ಹೆಸರುಃ - ಚಂದ್ರಶೇಖರಪ್ಪ ಬಸವಣ್ಣೆಪ್ಪ ಮೆಳ್ಳಗಟ್ಟಿ,

ವಯಸ್ಸು - 58 ವರ್ಷ

ಉದ್ಯೋಗ - ಕೃಷಿ

ವಾಸಸ್ಥಳ - ಕುಂದೂರು ಗ್ರಾಮ

ದಿನಾಂಕಃ 26-08-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-4 ನನ್ನ ಮಗಳು ಮತ್ತು ಚಾಸಾ-5 ನನ್ನ ಮಗ ಆಗಬೇಕು. ಆರೋಪಿಯು ನನಗೆ ಪರಿಚಯ ಇರುತ್ತಾರೆ. ದಿಃ 12-12-2017 ರಂದು ಸಾಯಂಕಾಲ 6.25 ಗಂಟೆ ಸುಮಾರಿಗೆ ನಾನು, ನನ್ನ ಹೆಂಡತಿ, ಮಕ್ಕಳಾದ ಕವಿತಾ, ಸವಿತಾ ಮತ್ತು ಈಶ್ವರ ಮನೆಯಲ್ಲಿ ಶೆಂಗಾ ಆರಿಸುತ್ತಿದ್ದೇವು. ಚಾಸಾ-4 ರವರರಿಗೆ ನಾನು ದೀಪಾ ಹಚ್ಚಲು ಹೇಳಿದ್ದೆ. ಆಗ ನನ್ನ ಮಗಳು ಹೊರಗೆ ಬಂದು ಮುಖ ತೊಳೆಯುತ್ತಿದ್ದಳು. ಆಗ ಆರೋಪಿಯು ಬಂದು ಗ್ವಾರಿಯಿಂದ ಚಾಸಾ-4 ರವರಿಗೆ ತಲೆಗೆ ಹೊಡೆದರು. ಏಟು ಬಿದ್ದ ತಕ್ಷಣ ಅವರು ಚೀರಿಕೊಂಡರು ಆಗ ಚಾಸಾ-5 ರವರು ಹೊರಗೆ ಹೋಗಿ ನೋಡಿದಾಗ ಆರೋಪಿಯು ಅವನಿಗೂ ಕೂಡ ಗ್ವಾರೆಯಿಂದ ಹೊಡೆಯಲು ಹೋದನು ಆಗ ಚಾಸಾ-5 ಅಲ್ಲಿಂದ ಓಡಿ ಹೋದನು. ನಾನು ನೋಡಲು ಹೋದಾಗ ನನಗೂ ಕೂಡ ಆರೋಪಿಯು ಗ್ವಾರೆಯಿಂದ ತಲೆಗೆ ಹೊಡೆದರು. ಆಗ ನನಗೆ ರಕ್ತ ಬರಲು ಶುರು ಆಯಿತು. ಚಾಸಾ-7 ರಿಂದ 9 ನೇದವರು ಜಗಳ ಬಿಡಿಸಿದರು. ಆಗ ಆರೋಪಿಯು ನನಗೆ ಜೀವದ ಬೆದರಿಕೆ ಹಾಕಿದರು

ಆಮೇಲೆ ನಾನು ಮತ್ತು ನನ್ನ ಮಗಳು ಚಾಸಾ-4 ಬಂಕಾಪುರ ಆಸ್ಪತ್ರೆಗೆ ಹೋದೆವು. ನಂತರ ಪೋಲಿಸ್ ಠಾಣೆಗೆ ದೂರನ್ನು ಕೊಡಲು ಹೋದೆವು. ನಾನು ಶಿವಾನಂದ ಅವರಿಂದ ಹೇಳಿ ಬರೆಸಿದೆ. ಮರುದಿನ ಪೋಲಿಸರು 10.30 ಸಮಯಕ್ಕೆ ಬಂದು ಪಂಚನಾಮೆ ಮಾಡಿದರು. ಆ ಸಮಯದಲ್ಲಿ ಚಾಸಾ-2 ಮತ್ತು 3 ಇದ್ದರು ಮತ್ತು ನಾನು ಪೋಲಿಸರಿಗೆ ಜಾಗೆಯನ್ನು ತೋರಿಸಿರುತ್ತೇನೆ. ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಿದರು. ನ್ಯಾಯಾಲಯದ ಮುಂದೆ ಇರುವ ಒಂದು ಗ್ವಾರೆಯನ್ನು ನಾನು ನೋಡಿ ಗುರುತಿಸುತ್ತೇನೆ. ಸದರಿ ಗ್ವಾರೆಯನ್ನು ಮು. ಮ. 01 ಎಂದು ಗುರುತಿಸಲಾಗಿದೆ.

ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸಾಕ್ಷಿಯು ಬಾಗಷಹ ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಆರೋಪಿಯು ನನಗೆ ಅವಾಚ್ಯ ಅಬ್ದಗಳಿಂದ ಬೈದರು ಎಂದರೆ ಸರಿ. ನನ್ನ ಸಮಕ್ಷಮ ಪಂಚನಾಮೆ ಮಾಡುವಾಗ ಹಾತ್ ನಕಾಶೆಯನ್ನು ತೆಗೆದಿರುತ್ತಾರೆ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ಮು.ಮ. 01 ನ್ನು ಜಪ್ತು ಮಾಡಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ ಶ್ರೀ ಎಫ್ ಎಂ. ಎಚ್.ಆರೋಪಿ ಪರ ವಕೀಲರಿಂದ</u>

ನನಗೆ ಓದಲು ಬರೆಯಲು ಸ್ವಲ್ಪ ಬರುತ್ತದೆ. ನಾನು 7 ನೇ ತರಗತಿವರೆಗೆ ಓದಿರುತ್ತೇನೆ. ನನ್ನ ಜಮೀನು ಶಿಗ್ಗಾಂವ ತಾಲೂಕಿನ ಗುಡ್ಡದಚನ್ನಾಪುರ ಗ್ರಾಮದಲ್ಲಿ ಬರುತ್ತದೆ. ಅದರ ಸರ್ವೆ ನಂ. 20 ಇದ್ದು ಕ್ಷೇತ್ರ 05 ಎಕರೆ 01 ಗುಂಟೆ ಇರುತ್ತದೆ. ಸದರಿ ಜಮೀನಲ್ಲಿ ಪ್ಲಾಟ್ ಇದ್ದು ಅಲ್ಲಿ 10 ರಿಂದ 15 ಜನರು ಇದ್ದಾರೆ. ಸರ್ವೆ ನಂ. 20ರ ಉತಾರದಲ್ಲಿ ಸುಮಾರು 15 ರಿಂದ 20 ಜನರ ಹೆಸರು ನಮೂದು ಆಗಿರುತ್ತದೆ. ಉತಾರದಲ್ಲಿ ಇರುವ ಎಲ್ಲರ ಹೆಸರು ಹೇಳಬಹುದಾ ಎಂದರೆ ಸಾಕ್ಷಿಯು ಕೆಲವರದ್ದು ಹೇಳಬಹುದು ಎಂದು ನುಡಿಯುತ್ತಾರೆ. ಅವರ ಹೆಸರು ಖಾದರಸಾಬ್, ತಿಪ್ಪನಗೌಡ ಪಾಟೀಲ ಮತ್ತು ಬಂಕಪ್ಪ ಬಸರಿಕಟ್ಟಿ, ನಾಗನಗೌಡ, ನಿಂಗನಗೌಡ, ಪಾಲಕ್ಷಪ್ಪ ರಾಯ್ಕುರ, ಪುಟ್ಟಪ್ಪ ನೇಕಾರ, ವೀರಪ್ಪ ಸಂಕಪ್ಪ ಹಳ್ಳಪ್ಪನವರ, ಗಂಗಾಧರ ಮೆಳ್ಳಾಗಟ್ಟಿ, ಸಿದ್ದಪ್ಪ ಮೆಳ್ಳಾಗಟ್ಟಿ ಚಂದ್ರಶೇಖರಪ್ಪ ಮೆಳ್ಳಾಗಟ್ಟಿ ಬಸವರಾಜ ಹಾನಗಲ್, ಮಂಜುನಾಥ ಹಾನಗಲ್ ಇರುತ್ತದೆ. ಸರ್ವೇ ನಂ. 20ರಲ್ಲಿ ಆಪ್ಸತ್ ಆಗಿ ಮನೆ ಕಟ್ಟಿರುತ್ತವೆ. ಈ ಮೇಲೆ ಹೇಳಿರುವ ಜನರಲ್ಲಿ ಕೆಲವರು ನನ್ನ ಸಂಬಂಧಿಕರು ಇರುತ್ತಾರೆ. ನನ್ನ ಮನೆ ಇದೇ ಸರ್ವೇ ನಂಬರ್ ನಲ್ಲಿ ಇರುತ್ತದೆ ಎಂದರೆ ಸರಿ. ಮೇಲಿನ ಹೇಳಿರುವ ಜನರ ಮನೆಯು ಕೂಡ ಅದೇ ಸರ್ವೇ ನಂಬರ್ ನಲ್ಲಿ ಇರುತ್ತದೆ ಎಂದರೆ ಸರಿ. ಸದರಿ 25 ಜನರ ಹೆಸರು ಪಂಚಾಯತ ದಾಖಲೆಯಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿ.

2. ಈ ಪ್ರತಿಯೊಂದು ಜನರಿಗೆ ಪಂಚಾಯತ್ನಲ್ಲಿ ಪ್ರತ್ಯೇಕವಾಗಿ ನಂಬರ್ ಕೊಟ್ಟಿರುತ್ತಾರೆ ಎಂದರೆ ಸರಿ. ನನ್ನ ಪಂಚಾಯತಿ ನಂಬರ್ ನನಗೆ ಸರಿಯಾಗಿ

ಹೇಳಲು ಬರುವುದಿಲ್ಲ. ಶಿವಪ್ಪರವರ ಪ್ಲಾಟ್ ನಂಬರ್ ನನಗೆ ಗೊತ್ತಿಲ್ಲ. ಸರ್ವೆ ನಂ. 20ರಲ್ಲಿ 01 ಎಕರೆ 11 ಗುಂಟೆ ಜಮೀನು ನನಗೆ ಬರುತ್ತದೆ. ಆರೋಪಿಯ ಮನೆಯು ಸರ್ವೆ ನಂ. 20ರಲ್ಲಿ ಬರುತ್ತದೆ ಎಂದರೆ ಸರಿ. ನನ್ನ ಮನೆ ಒಳಗೆ 05 ಜನ ಇರುತ್ತಾರೆ. ಘಟನೆ ನಡೆದಾಗ ಸದರಿ 05 ಜನರು ಮನೆಯಲ್ಲೇ ಇದ್ದರು. ಪಿರ್ಯಾದಿಯನ್ನು ರಾತ್ರಿ 9.00 ಗಂಟೆಗೆ ಕೊಟ್ಟಿರುತ್ತೇನೆ. ದೂರು ಕೊಡಲು ನಾವು ನಾಲ್ಕು ಜನ ಹೋಗಿದೇವು. ನಾನು ಒಬ್ಬನೇ ದೂರನ್ನು ಕೊಟ್ಟೆ ಶಿವಾನಂದ ಅವರಿಂದ ಬರೆಸಿಕೊಟ್ಟೆ. ಶಿವಾನಂದ ನನಗೆ ತಮ್ಮನ ಮಗ ಆಗಬೇಕು. ಶಿವಾನಂದ ಮನೆ ಹತ್ತಿರ ಆಗ ಬಂದಿದ್ದರು. ದೂರನ್ನು ಪೋಲಿಸ್ ಠಾಣೆಯಲ್ಲಿ ಬರೆದನು. ಘಟನೆ ಜಾಗದಿಂದ ಬಂದು ಶಿವಾನಂದ ಅವರು ಬರೆದುಕೊಟ್ಟರು. ಘಟನೆ ಜಾಗದಿಂದ ಪೋಲಿಸ್ ಠಾಣೆಯು 03 ಕಿ.ಮಿ. ಅಂತರದಲ್ಲಿ ಇರುತ್ತದೆ. ಶಿವಾನಂದ ಮತ್ತು ನಾನು ಪೋಲಿಸ್ ಠಾಣೆಗೆ ಕೂಡೇ ಬಂದೆವು. ಶಿವಾನಂದ ಮತ್ತು ನಾನು ಇಬ್ಬರೇ ಕೂಡಿ ಠಾಣೆಗೆ ಬಂದೆವು. ನಾನು ಶಿವಾನಂದ ಅವರಿಗೆ ದೂರನ್ನು ಕೊಡಲು ಮಾಹಿತಿ ಕೊಟ್ಟಿರುತ್ತೇನೆ. ನಾನು ದೂರಿನಲ್ಲಿ ಚಕಬಂದಿ ಹೇಳಿ ಬರೆಸಿರುವುದಿಲ್ಲ. ಶಿವಾನಂದರವರು ಬರೆದ ದೂರನ್ನು ನಾನು ಓದಿ ನೋಡಿರುತ್ತೇನೆ. ದೂರಿನಲ್ಲಿ ಏನು ಬರೆದಿದೆ ಎಂದು ಸುಮಾರು ಕಾಲ ಆಗಿದ್ದರಿಂದ ಅಷ್ಟು ನನಗೆ ನೆನಪಿಲ್ಲ. ದೂರನ್ನು ದಾಖಲೆ ಮಾಡುವಾಗ 9.10 ಗಂಟೆ ಆಗಿತ್ತು.

**(ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟಿಸವಾಲಿಗಾಗಿ ಮುಂದೂಡಲಾಗಿದೆ. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಅದೆ.

Sd/-26-08-22

ಜೆ. ಎಂ. ಎಫ್. ಸಿ., ಶಿಗ್ಗಾಂವ.